

ಜಲಪಾತ ಅವಲೋಕನ ಗೋಪುರ



ಜಲಪಾತ ಕಣ್ತುಂಬಿಕೊಂಡ ಲೇಖಕ

ಮೊದಲೇ ದೋಣಿ ತನ್ನ ಗತಿ ಬದಲಿಸಿತು. ಈಗ ದೋಣಿ ನೀರು ಹರಿಯುವ ದಿಶೆಯಲ್ಲಿ ಸಾಗತೊಡಗಿತು.

ನಯಾಗರದ ವೈಭವವನ್ನು ಮನ, ಮಸ್ತಿಷ್ಕಗಳಲ್ಲಿ ತುಂಬಿಕೊಂಡಿರುವಾಗಲೇ ದೋಣಿ ಅವಲೋಕನ ಗೋಪುರದ ತಳ ತಲುಪಿತು. ಅಲ್ಲಿ ನದಿಯ ದಡದ ಮೇಲೆ ಪ್ರವಾಸಿಗರು ಹೆಚ್ಚಿನ ಅನುಭವಕ್ಕಾಗಿ ಮೆಟ್ಟಿಲುಗಳನ್ನು ಹತ್ತಿ ಇನ್ನೂ ಹತ್ತಿರದಿಂದ ಅಮೆರಿಕ ಜಲಪಾತವನ್ನು ನೋಡಬಹುದು. ನಾವೂ ಈ ಅನುಭವದ ಸಿಹಿ ಉಂಡೆವು.

ಅಲ್ಲಿಂದ ಅವಲೋಕನ ಗೋಪುರಕ್ಕೆ ಏರಲು ಹೊರಟೆವು. ಅವಲೋಕನ ಗೋಪುರದಿಂದ ಅಮೆರಿಕದ ಜಲಪಾತ ಸೇರಿದಂತೆ ಮೂರೂ ಜಲಪಾತಗಳನ್ನು ಏಕಕಾಲಕ್ಕೆ ಮೇಲಿನಿಂದ ನೋಡಬಹುದು. ವಿಸ್ತಾರವಾದ ನದಿ, ಅಲ್ಲಿಂದ ರಭಸದಿಂದ ಹರಿವ ನೀರು ಕಲ್ಲುಗಳನ್ನು ಅಪ್ಪಳಿಸಿ ಕಡಲ ತೆರೆಗಳನ್ನು ನೆನಪಿಸುತ್ತದೆ. ಭೋರ್ಗರೆವ ಜಲಪಾತವನ್ನು ಗಂಟೆಗಟ್ಟಲೆ ನೋಡಿದರೂ, ಸಾಲದೆಂಬ ಅನಿಸಿಕೆ. ಮನಸ್ಸಿಲ್ಲದ ಮನಸ್ಸಿನಿಂದ, ಬಫೆಲ್ಲೋ ಎಂಬ ಊರಿನ ಹೋಟೆಲ್‌ಗೆ  ಮರುಳಿದೆವು. ದಾರಿಯುದ್ದಕ್ಕೂ ನಿಸರ್ಗದ ಈ ಅದ್ಭುತದ ಮಾತೇ. ಎಲ್ಲರೂ ತೆಗೆದ ಫೋಟೋ ಮತ್ತು ಸೆಲ್ಫಿಗಳನ್ನೂ ನೋಡಿದ್ದೇ ನೋಡಿದ್ದು.

ಸಾಯಂಕಾಲ ಇನ್ನೊಂದು ಅಚ್ಚರಿ ಕಾದಿತ್ತು. ಏಳು ಗಂಟೆಗೆ ಊಟ ಮಾಡಿ ತಯಾರಾಗಿರಲು ಹೇಳಿದ್ದರು. ಏನು ವಿಷಯ ಎಂದು ವಿಚಾರಿಸಿದಾಗ, ಬೆಳಕಿನಲ್ಲಿ ಅದೇ ಜಲಪಾತವನ್ನು ನೋಡುವ ಕಾರ್ಯಕ್ರಮ ಎಂದು ತಿಳಿಯಿತು. ರಾತ್ರಿ ಹಾರ್ಸ್‌ಶೂ ಜಲಪಾತದ ವೀಕ್ಷಣೆ. ಅಲ್ಲಿ ತಲುಪಿದಾಗ ರಾತ್ರಿಯ ಸುಳಿವೇ ಇಲ್ಲ! ಅಷ್ಟೊಂದು ಬೆಳಕು! ಸಾಕಷ್ಟು ಪ್ರಮಾಣದಲ್ಲಿ ಆಗಲೇ ಜನ ಸೇರಿದ್ದರು. ಅಸಾಧಾರಣ ಆಕಾಶದ ಹಿನ್ನೆಲೆಯಲ್ಲಿ ಬೆರಗುಗೊಳಿಸುವ ನಯಾಗರ ಜಲಪಾತ. ಅದ್ಭುತವಾದ ಬಣ್ಣದ ಬೆಳಕುಗಳ ಹಿನ್ನೆಲೆಯಲ್ಲಿ ಧುಮಕುವ ನೀರು ಮತ್ತು ನೀರಿನ ರಭಸಕ್ಕೆ ಮೇಲೇಳುವ ತುಂತುರು ಹನಿಗಳ ಸಾಂದ್ರತೆ. ರಾತ್ರಿಯ ನಿಶಬ್ದವನ್ನು ಸೀಳಿ ಪ್ರಪಾತಕ್ಕೆ ಬೀಳುವ ನೀರಿನ ಅಟ್ಟಹಾಸ. ಬಣ್ಣ ಬಣ್ಣದ ಬೆಳಕಿನ ಕಿರಣಗಳಿಗೆ ನಲಿಯುವ ನಯಾಗರ. ಮೋಡಿ ಮಾಡುವ ಈ ದೃಶ್ಯ ನಿಜಕ್ಕೂ ಅವಿಸ್ಮರಣೀಯ. ಹೋಟೆಲ್‌ಗೆ ಮರಳುವ ಸಂಕೇತ ಬಂದರೂ, ಯಾರೂ ಸಿದ್ಧರಿರಲಿಲ್ಲ. ಇನ್ನಷ್ಟು ಹೊತ್ತು ನೋಡುವ ಆಸೆ. ಸಮಯ ಮೀರಿದ ಕೊನೆಯ ಸಂಕೇತ ಬಂದಾಗ, ಮತ್ತೊಮ್ಮೆ ಕಣ್ತುಂಬ ನೋಡಿ, ಭಾರವಾದ ಹೃದಯದಿಂದ ಹೋಟೆಲ್‌ಗೆ ಮರಳಿದೆವು.

ಮರಳಿ ಊರಿಗೆ ಬಂದರೂ ಕಣ್ಣಮುಂದೆ ಭೋರ್ಗರೆಯುತ್ತಿದ್ದ ನಯಾಗರ ಜಲಪಾತದ ಸೊಬಗನ್ನು ಮರೆಯಲು ಆಗುತ್ತಿಲ್ಲ. ಈಗಲೂ ಜಲಪಾತದ ಕೆಳಗೆ ದೋಣಿಯಲ್ಲಿ ನಿಂತು ತುಂತುರು ನೀರಿನ ಸ್ಪರ್ಶವನ್ನು ಅನುಭವಿಸಿದಂತೆ ಅನ್ನಿಸುತ್ತಿದೆ. ನಯಾಗರವನ್ನು ಇನ್ನೊಮ್ಮೆ ನೋಡಲು ಹೋಗಬೇಕು ಎಂಬ ತುಡಿತ ಬಲವಾಗಿದೆ.